**ದಿನಾಂಕ:10.12.2013 ರಂದು ಬೆಳಗ್ಗೆ 11.00 ಗಂಟೆಗೆ ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕೌನ್ಸಿಲ್ ಸಭಾಂಗಣದಲ್ಲಿ ನಿರ್ದೇಶಕರು, ಮಿಮ್ಸ್ ಮಂಡ್ಯರವರ ಅಧ್ಯಕ್ಷತೆಯಲ್ಲಿ ನಡೆದ ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ವಿವಿಧ ವಿಭಾಗಗಳ ಮುಖ್ಯಸ್ಥರುಗಳ ಸಭೆಯ ನಡಾವಳಿಗಳು.**

ನಿರ್ದೇಶಕರು ಮೇಲ್ಕಂಡ ಸಭೆಯಲ್ಲಿ ಹಾಜರಾಗಿದ್ದ ಎಲ್ಲಾ ವಿಭಾಗಗಳ ಮುಖ್ಯಸ್ಥರುಗಳನ್ನು ಸಭೆಗೆ ಸ್ವಾಗತಿಸಿದರು.

1) ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವ 10 ಜನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ (ಪರಿಶಿಷ್ಟ ಜಾತಿ-07, ಪರಿಶಿಷ್ಟ ಪಂಗಡ-03) ಅತಿ ಹೆಚ್ಚು ಅಂಕ ಪಡೆದಿರುವ (ಪ್ಯಾರಾ ಮೆಡಿಕಲ್ ವಿದ್ಯಾರ್ಥಿಗಳು ಸೇರಿದಂತೆ)ವಿದ್ಯಾರ್ಥಿಗಳಿಗೆ ರೂ. 25,000/- ಗಳನ್ನು ಅವರ ಖಾತೆಗೆ ಜಮೆ ಮಾಡಲು ಸರ್ಕಾರದ ಆದೇಶದ ಮೇರೆಗೆ ಸಂಬಂಧಪಟ್ಟ ಮುಖ್ಯಸ್ಥರುಗಳು ಅತಿ ಹೆಚ್ಚು ಅಂಕ ಪಡೆದಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಪಟ್ಟಿಯನ್ನು ಅತೀ ಶೀಘ್ರವಾಗಿ ಕಛೇರಿಗೆ ಸಲ್ಲಿಸಲು ನಿರ್ದೇಶಕರು ಸೂಚಿಸಿದರು.

2) ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಯು.ಜಿ ಮತ್ತು ಪಿ.ಜಿ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರುಗಳು Training programme, conference, National Conference, International Conference ಗಳಿಗೆ ಈ ಯೋಜನೆಯಲ್ಲಿ ತೆರಳಲು ಪ್ರೋತ್ಸಾಹಿಸಲು ನಿರ್ದೇಶಕರು ಸೂಚಿಸಿದರು.

3) ಸಂಸ್ಥೆಯ ಬೋಧಕ ಆಸ್ಪತ್ರೆಗೆ ಬರುವಂತಹ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ರೋಗಿಗಳು ಮತ್ತು ಬಿ.ಪಿ.ಎಲ್ ಕಾರ್ಡ್ ಹೊಂದಿರುವ ರೋಗಿಗಳಿಗೆ ಉಚಿತ ತಪಾಸಣೆ ಮತ್ತು ಶುಶ್ರೂಷಣೆ ಬಗ್ಗೆ ಮಾಹಿತಿ ದೊರಕುವಂತೆ ಮಾಡಲು ವೈದ್ಯಕೀಯ ಅಧೀಕ್ಷಕರಿಗೆ ನಿರ್ದೇಶಕರು ಸೂಚಿಸಿದರು.

4) ಆರ್.ಎಫ್.ಡಿಗೆ ಸಂಬಂಧಿಸಿದಂತೆ ಪ್ರತಿ ಮಾಹೆ ವಿವಿಧ ವಿಭಾಗಗಳಿಂದ ಮಾಹಿತಿಯನ್ನು ಕ್ರೋಢೀಕರಿಸಿ ಸರ್ಕಾರಕ್ಕೆ ಸಲ್ಲಿಸಬೇಕಾಗಿರುವುದರಿಂದ ಈಗಾಗಲೇ ಅನೇಕ ಬಾರಿ ವಿಭಾಗಕ್ಕೆ ಸಂಬಂಧಪಟ್ಟ ಮಾಹಿತಿಗಳನ್ನು ನಿಗಧಿತ ದಿನಾಂಕದೊಳಗೆ ಸಲ್ಲಿಸುವಂತೆ ಸುತ್ತೋಲೆಯನ್ನು ಹೊರಡಿಸಿದ್ದರೂ ಸಹ ಕೆಲವು ವಿಭಾಗಗಳನ್ನು ಹೊರತುಪಡಿಸಿ ಉಳಿದ ವಿಭಾಗಗಳು ಆರ್.ಎಫ್.ಡಿ ಮಾಹಿತಿಯನ್ನು ಸಲ್ಲಿಸುತ್ತಿಲ್ಲ. ಸರ್ಕಾರದ ಕಾರ್ಯದರ್ಶಿಗಳು ಆರ್.ಎಫ್.ಡಿ ಮಾಹಿತಿಯನ್ನು ಕಡ್ಡಾಯವಾಗಿ ಸರ್ಕಾರಕ್ಕೆ ಪ್ರತಿ ಮಾಹೆ ಸಲ್ಲಿಸಲು ಸೂಚಿಸಿವುದರಿಂದ, ಎಲ್ಲಾ ವಿಭಾಗಗಳು ಕಡ್ಡಾಯವಾಗಿ ಪ್ರತಿ ತಿಂಗಳು 02 ನೇ ತಾರೀಖಿನೊಳಗೆ ಆರ್.ಎಫ್.ಡಿ ಮಾಹಿತಿಯನ್ನು ಕಛೇರಿಗೆ ಸಲ್ಲಿಸಲು ಸೂಚಿಸಿದರು.

5) ಸಂಸ್ಥೆಗೆ ಸಂಬಂಧಿಸಿದಂತೆ ನಡೆದ ಎಂ.ಎಂ.ಆರ್ ಸಭೆಯಲ್ಲಿ ಕಾರ್ಯದರ್ಶಿಗಳ ಆದೇಶಾನುಸಾರ ಎಲ್ಲಾ ವಿಭಾಗಗಳು Scientific Presentation ಮಾಡಲು ಸೂಚಿಸಿರುವ ಮೇರೆಗೆ ನಿಗಧಿತ

ಸಮಯದೊಳಗೆ Scientific Presentation ಮಾಡಲು ಸಭೆಯಲ್ಲಿದ್ದ ಎಲ್ಲಾ ಪ್ರಾಧ್ಯಾಪಕರು/ಮುಖ್ಯಸ್ಥರಿಗೆ ನಿರ್ದೇಶಕರು ತಿಳಿಸಿದರು.

6) ಸಂಸ್ಥೆಯ 21 ವಿಭಾಗಗಳಲ್ಲಿಯು ವರ್ಷಕ್ಕೆ ಒಂದು ಬಾರಿ ಸಿ.ಎಂ.ಇ ಕಾರ್ಯಕ್ರಮವನ್ನು ನಡೆಸಲು ಸರ್ಕಾರದ ಕಾರ್ಯದರ್ಶಿಗಳೊಂದಿಗೆ ಚರ್ಚಿಸಿರುವುದಾಗಿ ಹಾಗೂ 2014-15ನೇ ಸಾಲಿನ ಅನುದಾನದಲ್ಲಿ ವೆಚ್ಚವನ್ನು ಬಿಡುಗಡೆ ಮಾಡಲು ಕೋರಿರುವುದಾಗಿ ನಿರ್ದೇಶಕರು ಸೂಚಿಸಿದರು.

7) ಸಂಸ್ಥೆಯ ಕೆಲವು ವಿಭಾಗದ ವೈದ್ಯರುಗಳು ತಮ್ಮ ವಿಭಾಗದ ಮುಖ್ಯಸ್ಥರುಗಳ ಗಮನಕ್ಕೆ ತರದೆ Paper publish ಮಾಡುತ್ತಿದ್ದು ತದನಂತರ ವಿಭಾಗದ ಮುಖ್ಯಸ್ಥರ ಗಮನಕ್ಕೆ ಹಾಗೂ ಸಂಸ್ಥೆಯ ಗಮನಕ್ಕೆ ತರುತ್ತಿರುವುದರಿಂದ ಇನ್ನು ಮುಂದೆ ವಿಭಾಗದ ಮುಖ್ಯಸ್ಥರ ಗಮನಕ್ಕೆ ಬಾರದೇ ಯಾವುದೇ Paper publish ಮಾಡಿದಲ್ಲಿ ಅಂತಹ Paperಗಳಿಗೆ ಸಹಿಯನ್ನು ಹಾಕಬಾರದಾಗಿ ಎಲ್ಲಾ ವಿಭಾಗದ ಮುಖ್ಯಸ್ಥರುಗಳಿಗೆ ನಿರ್ದೇಶಕರು ಸೂಚಿಸಿದರು.

8) ವಿಭಾಗಗಳಲ್ಲಿ ಪ್ರತಿ ಮಾಹೆ ವಿಭಾಗಕ್ಕೆ ಸಂಬಂಧಿಸಿದಂತೆ ಸಭೆಯನ್ನು ನಡೆಸಿ ಅದರ ನಡಾವಳಿಯ ಪ್ರತಿಯನ್ನು ಕಛೇರಿಗೆ ಸಲ್ಲಿಸಲು ಸೂಚಿಸಿದ್ದರೂ ಸಹ ಕೆಲವೊಂದು ವಿಭಾಗಗಳನ್ನು ಹೊರತುಪಡಿಸಿ ಇನ್ನುಳಿದ ವಿಭಾಗಗಳು ಮಾಸಿಕ ಸಭೆ ಮಾಡದಿರುವ ಬಗ್ಗೆ ತಿಳಿಸಿ ಇನ್ನು ಮುಂದೆ ಕಡ್ಡಾಯವಾಗಿ ತಮ್ಮ ತಮ್ಮ ವಿಭಾಗಗಳಿಗೆ ಸಂಬಂಧಿಸಿದಂತೆ ಸಭೆಯನ್ನು ನಡೆಸಿ ನಡಾವಳಿ ಪ್ರತಿಯನ್ನು ಕಛೇರಿಗೆ ಕಳುಹಿಸಿ ಒಂದು ಪ್ರತಿಯನ್ನು ವಿಭಾಗದಲ್ಲಿ ಒಂದು ಕಡತ ತೆರದು ಇಡಲು ಮುಖ್ಯಸ್ಥರುಗಳಿಗೆ ಸೂಚಿಸಿದರು.

9) ಸರ್ಕಾರದ ಕಾರ್ಯದರ್ಶಿಗಳು ಈ ಸಂಸ್ಥೆಗೆ ಭೇಟಿ ನೀಡುವ ಸಂದರ್ಭದಲ್ಲಿ ಪ್ರತಿ ವಿಭಾಗಗಳಿಗೂ ಭೇಟಿ ನೀಡುವುದಾಗಿ ಸೂಚಿಸಿರುವುದರಿಂದ ತಮ್ಮ ತಮ್ಮ ವಿಭಾಗಕ್ಕೆ ಸಂಬಂದಪಟ್ಟ ಎಲ್ಲಾ ದಾಖಲೆಗಳನ್ನು ಸರಿಯಾದ ರೀತಿಯಲ್ಲಿ ಇಟ್ಟುಕೊಳ್ಳಲು ಹಾಗೂ ಎಲ್ಲಾ ಸಿಬ್ಬಂದಿಗಳಿಗೂ ಒಂದೊಂದು ಜವಾಬ್ದಾರಿಯನ್ನು ಲಿಖಿತ ರೂಪದಲ್ಲಿ ವಹಿಸಲು ವಿಭಾಗಗಳ ಪ್ರಾಧ್ಯಾಪಕರು/ಮುಖ್ಯಸ್ಥರುಗಳಿಗೆ ನಿರ್ದೇಶಕರು ಸೂಚಿಸಿದರು

10) ಸಂಸ್ಥೆಯ ಮಕ್ಕಳ ವಿಭಾಗ ಹಾಗೂ ಗರ್ಭಿಣಿ ಮತ್ತು ಸ್ತ್ರೀರೋಗ ವಿಭಾಗಗಳಿಂದ ಡಿ.ಹೆಚ್.ಓ ಮತ್ತು ಜಿಲ್ಲಾಧಿಕಾರಿಗಳ ಕಛೇರಿಗೆ, ವಿಭಾಗಳಿಗೆ ಸಂಬಂಧಪಟ್ಟಂತೆ ಮಾಹಿತಿಗಳನ್ನು ಸಲ್ಲಿಸಬೇಕಿರುವುದನ್ನು ಇನ್ನು ಮುಂದೆ ವೈದ್ಯಕೀಯ ಅಧೀಕ್ಷಕರ ಮುಖಾಂತರ ಸಂಬಂಧಪಟ್ಟವರಿಗೆ ಕಳುಹಿಸಿಲು ನಿರ್ದೇಶಕರು ಸೂಚಿಸಿದರು.

11) ಕೆಲವೊಂದು ವಿಭಾಗಗಳಲ್ಲಿ ಮುಖ್ಯಸ್ಥರುಗಳ ಗಮನಕ್ಕೆ ತರದೆ ಕೆಲವು ಕೆಲಸಗಳನ್ನು ಮಾಡುತ್ತಿದ್ದು, ಇನ್ನು ಮುಂದೆ ವಿಭಾಗಗಳಿಗೆ ಸಂಬಂಧಪಟ್ಟ ಯಾವುದೇ ರೀತಿಯ ಕೆಲಸಗಳನ್ನು ವಿಭಾಗದ ಮುಖ್ಯಸ್ಥರುಗಳ ಗಮನಕ್ಕೆ ತಂದು ಅನಂತರ ಕೆಲಸಕಾರ್ಯಗಳನ್ನು ಮಾಡುವಂತೆ ತಿಳಿಸಲು ವಿಭಾಗದ ಪ್ರಾಧ್ಯಾಪಕರು/ಮುಖ್ಯಸ್ಥರುಗಳಿಗೆ ನಿರ್ದೇಶಕರು ಸೂಚಿಸಿದರು.

12) ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವ ಗೃಹವೈದ್ಯರುಗಳು ಖಾಸಗಿ ನರ್ಸಿಂಗ್ ಹೋಂಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದು ಕಂಡುಬಂದಿರುವುದರಿಂದ ವಿಭಾಗಗಳ ಮುಖ್ಯಸ್ಥರುಗಳು ತಮ್ಮ ವಿಭಾಗಕ್ಕೆ ಸಂಬಂಧಪಟ್ಟ ಗೃಹವೈದ್ಯರುಗಳ ಸಭೆಯನ್ನು ಕರೆದು ಕಡ್ಡಾಯವಾಗಿ ಖಾಸಗಿ ನರ್ಸಿಂಗ್ ಹೋಂಗಳಲ್ಲಿ ಕರ್ತವ್ಯಕ್ಕೆ ತೆರಳದಿರಲು ಸೂಚಿಸಲು ಹಾಗೂ ತದನಂತರವು ತೆರಳಿದರೆ ಅವರ ಮೇಲೆ ಸಂಬಂಧಪಟ್ಟ ವಿಭಾಗದ ಪ್ರಾಧ್ಯಾಪಕರು/ಮುಖ್ಯಸ್ಥರು ಕ್ರಮಕೈಗೊಳ್ಳಲು ನಿರ್ದೇಶಕರು ಸೂಚಿಸಿದರು.

13) ಸಂಸ್ಥೆಯ ಕ್ಲಿನಿಕಲ್ ವಿಭಾಗಗಳಲ್ಲಿ ಯಾವುದಾದರೂ ದೂರುಗಳು ಬಂದಲ್ಲಿ ಹಾಗೂ ತಮ್ಮ ವಿಭಾಗಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಗಳು ಕರ್ತವ್ಯದ ಸಮಯದಲ್ಲಿ (ಬೆಳಿಗ್ಗೆ ೯.೦೦ ರಿಂದ 4) ಕರ್ತವ್ಯದ ಸ್ಥಳದಲ್ಲಿ ಇರುವಂತೆ ಹಾಗೂ ಕರ್ತವ್ಯದ ಸ್ಥಳದಲ್ಲಿ ಇಲ್ಲದಿದ್ದರೆ ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರುಗಳು ಜವಬ್ದಾರರಾಗಿರುತ್ತಾರೆ ಎಂಬುದನ್ನು ನಿರ್ದೇಶಕರು ಮುಖ್ಯಸ್ಥರುಗಳಿಗೆ ಸೂಚಿಸಿದರು.

14) ಹೈದರಾಬಾದ್ ಕರ್ನಾಟಕದ ಜನರಿಗೆ ಸರ್ಕಾರವು ಮೀಸಲಾತಿ ಅನುಸಾರ ತಮ್ಮ ತಮ್ಮ ವಿಭಾಗಗಳಲ್ಲಿ ಬರುವಂತೆ ಸಿಬ್ಬಂದಿಗಳಿಗೆ ತಿಳಿಸಿ ಮಾಹಿತಿಯನ್ನು ಕಛೇರಿಗೆ ಕೂಡಲೇ ಕಳುಹಿಸುವಂತೆ ನಿರ್ದೇಶಕರು ಸೂಚಿಸಿದರು.

15) ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಜ್ಯೂನಿಯರ್ ರೆಸಿಡೆಂಟ್‌ಗಳಿಗೆ ಕೇವಲ 10 ದಿನಗಳು ಮಾತ್ರ LWP ಹಾಕಲು ಅನುಮತಿಯನ್ನು ನೀಡುವಂತೆ ಈಗಾಗಲೇ ತಿಳಿಸಿದ್ದರೂ ಸಹ ಪ್ರತಿ ತಿಂಗಳು ರಜೆಗಳನ್ನು ಹಾಕುತ್ತಿದ್ದು ಕೆಲಸಗಳಿಗೆ ತೊಂದರೆಯಾಗುತ್ತಿದ್ದು ಸಂಬಂಧಪಟ್ಟ ಮುಖ್ಯಸ್ಥರುಗಳು ಅನುಮತಿಯನ್ನು ನೀಡುವ ಸಂದರ್ಭದಲ್ಲಿ ಪರಿಶೀಲಿಸಿ ಅನುಮತಿಯನ್ನು ನೀಡುವಂತೆ ನಿರ್ದೇಶಕರು ಸೂಚಿಸಿದರು.

16) ಸಂಸ್ಥೆಯ ಆರ್.ಡಿ.ಎಲ್ (ಕೇಂದ್ರ ಪ್ರಯೋಗಲಾಯ) ಮತ್ತು ರಕ್ತನಿಧಿ ಕೇಂದ್ರಗಳಿಗೆ ಅಧಿಕಾರಿಗಳಾಗಿ ಡಾ॥ಮುರಳೀಧರ್ ಬಟ್ ಮತ್ತು ಡಾ॥ ಮಂಜುನಾಥ್ ಎಂ.ಆರ್ ರೋಗಲಕ್ಷಣಶಾಸ್ತ್ರ ವಿಭಾಗ ರವರುಗಳನ್ನು ಬದಲಾವಣೆಯೊಂದಿಗೆ ಕರ್ತವ್ಯಕ್ಕೆ ನಿಯೋಜಿಸಲು ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರು/ಪ್ರಾಧ್ಯಾಪಕರಿಗೆ ನಿದೇಶಕರು ಸೂಚಿಸಿದರು.

17) ಸಂಸ್ಥೆಯ ಆರ್.ಡಿ.ಎಲ್‌ಗೆ ವೈದ್ಯಕೀಯ ಅಧೀಕ್ಷಕರರವರನ್ನು ಮುಖ್ಯಸ್ಥರಾಗಿ ನೋಡಿಕೊಳ್ಳಲು ಆರ್.ಡಿ.ಎಲ್‌ಗೆ ಸಂಬಂಧಪಟ್ಟಂತೆ ಇಂಡೆಂಟ್‌ಗಳನ್ನು ವೈದ್ಯಕೀಯ ಅಧೀಕ್ಷಕರವರೆ ನಿರ್ವಹಿಸಲು ನಿರ್ದೇಶಕರು ಸೂಚಿಸಿದರು.

ನಿರ್ದೇಶಕರು,
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಮಂಡ್ಯ.